# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2883 |
| ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ಮುನಿರಾಜು ಗೌಡ.ಪಿ.ಎಂ. (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 30.03.2022 |
| ಉತ್ತರಿಸುವ ಸಚಿವರು | : | ಮಾನ್ಯ ಪಶುಸಂಗೋಪನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯಗಳು ಎಲ್ಲೆಲ್ಲಿ ಕಾರ್ಯನಿರ್ವಹಿಸುತ್ತಿದೆ; | ರಾಜ್ಯದಲ್ಲಿ ಪ್ರಸ್ತುತ ಏಕೈಕ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರ ದಲ್ಲಿ ತನ್ನ ಕಾರ್ಯನಿರ್ವಹಿಸುತ್ತಿದೆ. |
| ಆ) | ಈ ಪಶು ವಿಶ್ವವಿದ್ಯಾಲಯದಲ್ಲಿ ಮಂಜೂರಾಗಿರುವ ಬೋಧಕ ಮತ್ತು ಬೋಧಕೇತರ (Teaching and Non Teaching) ಒಟ್ಟು ಎಷ್ಟು ಹುದ್ದೆಗಳೆಷ್ಟು; (ವೃಂದವಾರು ವಿವರ ನೀಡುವುದು) | ಈ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ ಇಲ್ಲಿ ಭೋಧಕ ಮತ್ತು ಬೋಧಕೇತರ (Teaching and Non Teaching) ಒಟ್ಟು ಮಂಜೂರಾಗಿರುವ ಹುದ್ದೆಗಳ ವಿವರ ಈ ಕೆಳಗಿನಂತಿರುತ್ತದೆ. (ವೃಂದವಾರು ವಿವರ) |

**ಬೋಧಕರ ಹುದ್ದೆಗಳು**

| ಕ್ರ. ಸಂ | ಹುದ್ದೆಗಳು (ವೃಂದವಾರು) | ಮಂಜೂರಾದ ಒಟ್ಟು ಹುದ್ದೆಗಳು |
|---|---|---|
| 01 | ಪ್ರಾಧ್ಯಾಪಕರು | 114 |
| 02 | ಸಹ ಪ್ರಾಧ್ಯಾಪಕರು | 158 |
| 03 | ಸಹಾಯಕ ಪ್ರಾಧ್ಯಾಪಕರು | 416 |
| | **ಒಟ್ಟು ಹುದ್ದೆಗಳು** | **688** |

**ಬೋಧಕೇತರ ಹುದ್ದೆಗಳು**

| ಕ್ರ ಸಂ | ಹುದ್ದೆಗಳು (ವೃಂದವಾರು) | ಮಂಜೂರಾದ ಒಟ್ಟು ಹುದ್ದೆಗಳು |
|---|---|---|
| 01 | ಎ ವೃಂದ | 70 |
| 02 | ಬಿ ವೃಂದ | 35 |
| 03 | ಸಿ ವೃಂದ | 633 |
| 04 | ಡಿ ವೃಂದ | 655 |
| | **ಒಟ್ಟು** | **1393** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಇ) | ವಿಶ್ವವಿದ್ಯಾಲಯದಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಹುದ್ದೆಗಳು ಎಷ್ಟು; (ವೃಂದವಾರು ವಿವರ ನೀಡುವುದು) | ಈ ವಿಶ್ವವಿದ್ಯಾಲಯದಲ್ಲಿ ಹಾಲಿ ಕಾರ್ಯ ನಿರ್ಹಿಸುತ್ತಿರುವ ಬೋಧಕ ಹುದ್ದೆಗಳ ವಿವರ ಈ ಕೆಳಕಂಡಂತೆ ಇರುತ್ತದೆ (ವೃಂದವಾರು ವಿವರ) |

| ಕ್ರ ಸಂ | ಹುದ್ದೆಗಳು (ವೃಂದವಾರು) | ಕಾರ್ಯನಿರ್ಹಿಸುತ್ತಿರುವ ಬೋಧಕರು (ವೃಂದವಾರು) |
|---|---|---|
| 01 | ಪ್ರಾಧ್ಯಾಪಕರು | 38 |

| | | |
|---|---|---|
| | | 02 \| ಸಹ ಪ್ರಾಧ್ಯಾಪಕರು \| 32<br>03 \| ಸಹಾಯಕ ಪ್ರಾಧ್ಯಾಪಕರು \| 220<br>**ಒಟ್ಟು ಹುದ್ದೆಗಳು** \| **290** |
| ಈ) | ಗಣನೀಯ ಸಂಖ್ಯೆಯಲ್ಲಿ ಬೋಧಕ ಹುದ್ದೆಗಳು ಖಾಲಿ ಇರುವುದರಿಂದ, ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಬೋಧನೆ ಹಾಗೂ ಸಂಶೋಧನೆ ಸೇರಿದಂತೆ ಶೈಕ್ಷಣಿಕ ಚಟುಟಿಕೆಗಳ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ ಇಲ್ಲಿನ ವಿವಿಧ ಅಂಗಸಂಸ್ಥೆಗಳಲ್ಲಿ ಖಾಲಿ ಇರುವ ಬೋಧಕರ ಹುದ್ದೆಗಳ ಎದುರಾಗಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಹ ಪಶುವೈದ್ಯರನ್ನು ನಿಯೋಜನೆ ಮೇಲೆ ಸಹಾಯಕ ಪ್ರಾಧ್ಯಾಪಕರೆಂದು (ಒಪಿಜಿ) ವಿಶ್ವವಿದ್ಯಾಲಯದ ಅಂಗಸಂಸ್ಥೆಗಳಲ್ಲಿ ಸೇವೆ ಪಡೆಯಲಾಗುತ್ತಿದೆ ಹಾಗೂ ಗುತ್ತಿಗೆ ಆಧಾರದ ಮೇಲೆ 179 ದಿವಸಗಳಿಗೆ ಸೀಮಿತವಾಗಿ ಸಹಾಯಕ |
| ಉ) | ಬಂದಿದ್ದಲ್ಲಿ, ಬೋಧಕ ಹುದ್ದೆಗಳು ಖಾಲಿ ಇರುವುದರಿಂದ ಶೈಕ್ಷಣಿಕ ಚಟುವಟಿಕೆಗಳ ಮೇಲೆ ಉಂಟಾಗಿರುವ ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಪ್ರಾಧ್ಯಾಪಕರೆಂದು ನೇಮಕ ಮಾಡಿಕೊಳ್ಳಲಾಗಿದೆ. ಇದರಿಂದಾಗಿ ವಿದ್ಯಾರ್ಥಿಗಳಿಗೆ ಬೋಧನೆ ಹಾಗೂ ಸಂಶೋಧನೆ ಸೇರಿದಂತೆ ಶೈಕ್ಷಣಿಕ ಚಟುವಟಿಕೆಗಳ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಿರುವುದಿಲ್ಲ.<br><br>ಅದಾಗ್ಯೂ ಖಾಲಿ ಇರುವ ಹುದ್ದೆಗಳ ಪೈಕಿ ಸರಕಾರವು ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಮೀಸಲಿರುವ ಒಟ್ಟು 226 ಹುದ್ದೆಗಳು ನೇರ ನೇಮಕಾತಿ ಮಾಡಲು ಅನುಮತಿ ನೀಡಲಾಗಿದೆ ಹಾಗೂ ತುರ್ತಾಗಿ ನೇಮಕಾತಿ ಪ್ರಕ್ರಿಯೇ ಪೂರ್ಣಗೊಳಿಸುವಂತೆಯೂ ಸಹ ವಿಶ್ವವಿದ್ಯಾಲಯಕ್ಕೆ ಸೂಚಿಸಲಾಗಿದೆ.<br><br>ಮುಂದುವರೆದು, ಉಳಿಕೆಮೂಲ ವೃಂದದಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಸಹಮತಿ ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸಹಮತಿ ದೊರೆತ ಕೂಡಲೇ ನೇಮಕಾತಿ ಪ್ರಕ್ರಿಯೆಯನ್ನು ನಿಯಮಾನುಸಾರ ತುರ್ತಾಗಿ ಪ್ರಾರಂಭಿಸಲು ವಿಶ್ವವಿದ್ಯಾಲಯಕ್ಕೆ ಸೂಚಿಸಲಾಗುವುದು. |

**ಸಂಖ್ಯೆ: ಪಸಂಮೀ ಇ-92 ಪಅಸೇ 2022**

(ಪ್ರಭು.ಬಿ. ಚವ್ಹಾಣ್)
ಪಶುಸಂಗೋಪನೆ ಸಚಿವರು